ಕಾಡಿನಲ್ಲಿ ಜೀವಿಸತೊಡಗಿದ. ಥೋರೋ ಜೀವನ ಶೈಲಿ ಹಾಗೂ ಬಂಡಾಯ ಜಗತ್ತಿನ ಹಲವರಿಗೆ ಸ್ಫೂರ್ತಿಯಾದಂತೆ ಗಾಂಧೀಜಿಗೂ ಒಂದು ಘಟ್ಟದಲ್ಲಿ ಸ್ಫೂರ್ತಿಯಾಯಿತು. ಮುಂದೆ ತಮ್ಮ ಹೋರಾಟದ ಭಾಗವಾಗಿ ಉಪವಾಸ ಸತ್ಯಾಗ್ರಹವನ್ನು ರೂಪಿಸಿಕೊಂಡ ಗಾಂಧೀಜಿ ತಮ್ಮ ಉಪವಾಸಗಳ ಹಿಂದಿದ್ದ ನಿಸ್ವಾರ್ಥ ಗುಣವನ್ನು ತಾಯಿಯಿಂದ ಕಲಿತಿದ್ದನ್ನೂ ನೆನೆಯುತ್ತಾರೆ: 'ನನ್ನ ತಾಯಿ ಯಾವ ಸ್ವಾರ್ಥವೂ ಇರದ ಕಾರಣಗಳಿಗೂ ಉಪವಾಸ ಮಾಡುತ್ತಿದ್ದಳು. ನಮ್ಮ ಕೂಡುಕುಟುಂಬದಲ್ಲಿ ಯಾರಿಗಾದರೂ ಕಾಯಿಲೆಯಾದರೂ ಉಪವಾಸ ಮಾಡುತ್ತಿದ್ದಳು. ಅವಳಿಂದ ನಾನು ಸ್ಫೂರ್ತಿ ಪಡೆದೆ.'



ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್

ಹೀಗೆ ಹಲವು ದಿಕ್ಕಿನಿಂದ ಹಲವು ಪ್ರೇರಣೆಗಳನ್ನು ಪಡೆದ ಗಾಂಧೀಜಿ ಹಲವು ದೇಶಗಳ, ವಿಭಿನ್ನ ಶೈಲಿಗಳ ನಾಯಕರಿಗೆ ಹಾಗೂ ನಾಡುಗಳಿಗೆ ಬಿಡುಗಡೆಯ ದಾರಿ ತೋರುತ್ತಲೇ ಇದ್ದಾರೆ. ಇಂಡಿಯಾದಲ್ಲಂತೂ ಅವರು ಬೆಳೆಸಿದ ನೆಹರೂ, ಜೆಪಿ, ವಿನೋಬಾ ಭಾವೆ, ಲೋಹಿಯಾ ಮುಂತಾದ ನೂರಾರು ನಾಯಕರಿಂದ ಹಿಡಿದು ಕರ್ನಾಟಕದಲ್ಲಿ ಇವತ್ತಿಗೂ ಕ್ರಿಯಾಶೀಲವಾಗಿರುವ ದೊರೆಸ್ವಾಮಿಯವರವರೆಗೂ ಗಾಂಧೀ ಮಾರ್ಗವನ್ನು ಕಾಲಕಾಲಕ್ಕೆ ವಿಸ್ತರಿಸಿ ಬೆಳೆಸಿದ ಧೀಮಂತರಿದ್ದಾರೆ. ಗಾಂಧೀಜಿಯ ಮಾರ್ಗ ಅಮೆರಿಕದ ಕಪ್ಪು ಜನರ ಬಿಡುಗಡೆಯ ಹೋರಾಟದಲ್ಲಿ, ದಕ್ಷಿಣ ಆಫ್ರಿಕಾದ ಸ್ವಾತಂತ್ರ್ಯ ಹೋರಾಟದ ಕೆಲವು ಘಟ್ಟಗಳಲ್ಲಿ, ಬರ್ಮಾದಲ್ಲಿ ಆಂಗ್ ಸಾನ್ ಸೂಕಿ ಕಟ್ಟಿದ ರಾಜಕೀಯ ಹೋರಾಟದಲ್ಲಿ ಪ್ರೇರಕ ಶಕ್ತಿಯಾಯಿತು. ಅಹಿಂಸೆ ಮತ್ತು ನಿರ್ಭೀತಿ ಎರಡೂ ಒಟ್ಟಿಗೇ ಇರಬೇಕೆಂದು ಗಾಂಧೀಜಿ ಕಲಿಸಿಕೊಟ್ಟ ಪಾಠ ಮಾರ್ಟಿನ್ ಲೂಥರ್ ಕಿಂಗ್ ಹಾಗೂ ಸೂಕಿ ಇಬ್ಬರ ವ್ಯಕ್ತಿತ್ವವನ್ನೂ ರೂಪಿಸಿತು.

'ಸತ್ಯಾಗ್ರಹಿಯಾದವರು ಮೊದಲು ಭೀತಿಗೆ ವಿದಾಯ ಹೇಳಬೇಕು' ಎಂಬ ಗಾಂಧೀಜಿಯ ಮಾತು ಸೂಕಿಯ ರಾಜಕೀಯ ಜೀವನದಲ್ಲಿ ಮತ್ತೆ ಮತ್ತೆ ಕೈಹಿಡಿದು ನಡೆಸುತ್ತಿತ್ತು. 1988ರಲ್ಲಿ ಬರ್ಮಾದಲ್ಲಿ ಚುನಾವಣೆ ಘೋಷಿಸಲಾಗಿತ್ತು. ಆಗಿನ ಸರ್ಕಾರ ಸೂಕಿಯ ಚುನಾವಣಾ ಪ್ರಚಾರಕ್ಕೆ ನಿಷೇಧ ಹೇರಿತ್ತು. ಅದಕ್ಕೆ ಸೊಪ್ಪು ಹಾಕದೆ ಸೂಕಿ ಚುನಾವಣಾ ಪ್ರಚಾರದಲ್ಲಿ ತೊಡಗಿದ್ದರು. ಒಮ್ಮೆ ಸೂಕಿ ಚುನಾವಣಾ ಪ್ರಚಾರ ಮಾಡಲು ಜೊತೆಗಾರರೊಂದಿಗೆ ರಸ್ತೆಯಲ್ಲಿ ಹೋಗುತ್ತಿದ್ದಾಗ ಮಿಲಿಟರಿ ಮೇಜರ್ ಒಬ್ಬನ ನೇತೃತ್ವದಲ್ಲಿ ಬರ್ಮಾದ ಸೈನಿಕರು ಎದುರಾದರು. ಆ ಸೈನಿಕರು 'ಒಂದಡಿ ಮುಂದಿಟ್ಟರೆ ನಿಮ್ಮನ್ನು ಶೂಟ್ ಮಾಡುತ್ತೇವೆ' ಎಂದು ಸೂಕಿಯ ತಂಡದೆದುರು ಬಂದೂಕುಗಳನ್ನು ಗುರಿಯಿಟ್ಟು ನಿಂತರು. ತಮ್ಮ ಸಂಗಡಿಗರನ್ನು ಪಕ್ಕಕ್ಕೆ ಸರಿದು ನಿಲ್ಲಲು ಹೇಳಿದ ಸೂಕಿ ಮುಂದಕ್ಕೆ ಅಡಿಯಿಟ್ಟು ಬಂದೂಕುಗಳ ಎದುರು ನಡೆಯತೊಡಗಿದರು. ಹಿಂಸೆಯ ಭಾಷೆಯನ್ನು ಬಳಸದ, ನಿರಾಯುಧರಾದ ಬುದ್ಧಿಸ್ಟ್ ಸೂಕಿಯ ನೈತಿಕ ಸ್ಥೈರ್ಯ ಕಂಡು ಬೆಚ್ಚಿದ ಮೇಜರ್, 'ಬಂದೂಕು ಚಲಾಯಿಸಬೇಡಿ' ಎಂದು ತನ್ನ ಸೈನಿಕರಿಗೆ ಆಜ್ಞೆ ಮಾಡಿದ.